Reg No.· B G 155 12-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ.
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳವಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪೆಚ್ಚು ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ ಬೆಲೆ 2 ಪೈಸೆ

ಬೇಂಕುಗಳ ರಾಷ್ಟ್ರೀಕರಣವೇ!

ಮೈಸೂರು ರಾಜ್ಯದ ಭೂಸುಧಾರಕರ
— ಸಮ್ಮೇಳನ —
ತಾ॥ 20-7-1969 ಭಾನುವಾರ
ಮೈಸೂರು ಪುರಭವನದಲ್ಲಿ
ಎಲ್ಲಾ ಭೂಸುಧಾರಕರೂ ಭಾಗವಹಿಸಿ
ಸಹಕರಿಸಬೇಕೆಂದು ಕೋರಲಾಗಿದೆ.
ಪ್ರತಿನಿಧಿ ಶುಲ್ಕ ರೂ 5
ಸ್ವಾಗತ ಸಮಿತಿ ಶುಲ್ಕ ರೂ. 10.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೀಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುನ್ಮಹಾರಾಜರು, ನುತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯೈ ವರರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ವುತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಮಹಾಜನ ಕಮಿಷನ್ ವರದಿ

ಬೆಂಗಳೂರು— ಮಹಾಜನ ಕಮಿಷನ್ ವರದಿಯನ್ನು ಕ್ಷಿಪ್ರದಲ್ಲೇ ಜಾರಿಗೆ ತರಲು ಒತ್ತಾಯಮಾಡಲು ಹಲವು ಕಂಠ್ಠಿಗಳ ನಿಯೋಗಗಳು ಪ್ರಧಾನಿಯವರನ್ನು ಭೇಟಿ ಮಾಡಿವು

★

ಟಿಕೀಟಿಲ್ಲದ ಪ್ರಯಾಣ

ನವದೆಹಲಿ— ರೈಲಿನಲ್ಲಿ ಟಿಕೀಟಿಲ್ಲದ ಪ್ರಯಾಣಿಕರ ಮೇಲೆ ಜುಲ್ಮಾನೆಯನ್ನು ಬಹಳವಾಗಿ ಹೆಚ್ಚಿಸಿದ ಪರಿಣಾಮವಾಗಿ ಟಿಕೀಟಿಲದೆ ಪ್ರಯಾಣ ಮಾಡುವವರ ಸಂಖ್ಯೆ ಬಹುಮಟ್ಟಿಗೆ ತಗ್ಗಿದೆ.

★

ಪ್ರಧಾನಿಗಳ ವಿಜಯ

ಬೆಂಗಳೂರು— ಪ್ರಧಾನಿಗಳು ಸೂಚಿಸಿರುವ ಬ್ಯಾಂಕು ರಾಷ್ಟ್ರೀಕರಣವೂ ಸೇರಿದ ಆರ್ಥಿಕ ನೀತಿಯನ್ನು ಏಐಸಿಸಿಗೆ ಶಿಫಾರಸ್ಸು ಮಾಡಲು ಕಾರ್ಯಕಾರಿ ಸಮಿತಿ ಅನುಮೋದಿಸಿತು – ಮೊದಲು ಇದಕ್ಕೆ ವಿರುದ್ಧಾಭಿಪ್ರಾಯಗಳು ಬಲವಾಗಿತ್ತು.

★

ಗೋಧಿ ಮೇಲಿನ ಹತೋಟಿ

ಬೆಂಗಳೂರು— ರಾಜ್ಯದಲ್ಲಿ ಗೋಧಿ ಪದಾರ್ಥಗಳು ಹೆಚ್ಚಾಗಿ ದೊರೆಯುತ್ತಿರುವದರಿಂದ ಅದರ ಹಂಚಿಕೆ ಮೇಲಿನ ಹತೋಟಿಯನ್ನು ಸರ್ಕಾರ ತೆಗೆದಿದೆ.

★

ಧಾಳಿ ಬೆದರಿಕೆ

ಕಲ್ಲೀಕೋಟೆ— ಚಿತ್ತೂರು ತಾಲ್ಲೂಕಿನ ಒಂದು ಪೋಲೀಸು ಸ್ಟೇಷನ್ ಮೇಲೆ ತಾ॥ 30 ನ್ನು ಮುಂಜೆ ಯಾವತ್ತಾದರೂ ಧಾಳಿ ನಡೆಸಲಾಗುವದೆಂಬ ಬೆದರಿಕೆ ಹಾಕಲಾಗಿದೆ. ಇದು ನಕ್ಸಲೈಟರ ಕಾರ್ಯವೆಂದುಕೊಳ್ಳಲಾಗಿದೆ.

ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ

ನವದೆಹಲಿ— ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಪಾರ್ಟಿ ಆಜ್ಞೆಯಿಲ್ಲದೆ ಅನಿರ್ಬಂಧವಾಗಿ ವೋಟು ಮಾಡಲು ಅವಕಾಶವಿರಬೇಕೆಂದು ನಾಲ್ಕು ಮಂದಿ ಪಾರ್ಲಿಮೆಂಟು ಸದಸ್ಯರು ವಿನಂತಿಸಿದ್ದಾರೆ.

●

ತೆಲಂಗಾಣಾದವರು

ಬೆಂಗಳೂರು— ಅತೃಪ್ತ ತೆಲಂಗಾಣಾ ಪ್ರದೇಶ ಕಾಂಗ್ರೆಸ್ಸು ಸಮಿತಿಯವರು ಸಂಸ್ಥೆಗೆ ಮನ್ನಣೆ ದೊರೆಯುವಂತೆ ಕಾಂಗ್ರೆಸ್ ರಚನೆಯಲ್ಲಿ ತಿದ್ದುಪಡಿಗೆ ಪ್ರಯತ್ನ ಮಾಡಿರುವರು – ಹೈದರಾಬಾದಿನ 11 ಮಂದಿ ಪೌರಸಭಾ ಸದಸ್ಯರು ಮತ್ತಿತರ 11 ಮಂದಿಯೂ ಗುರುವಾರ ಗ್ಲಾಸ್‌ಹೌಸ್ ಹತ್ತಿರ ಸಾಮೂಹಿಕ ಉಪವಾಸ ಆಚರಿಸಿದರು – ಕೂಡಲೇ ರಾಷ್ಟ್ರಾಧ್ಯಕ್ಷ ಆಳ್ವಿಕೆ ಒರಲೆಂದು ಅವರ ಕೇಳಿಕೆ.

★

ಮಾರ್ಕ್ಸಿಸ್ಟರು

ಬೆಂಗಳೂರು— ರಾಜ್ಯಾಂಗವನ್ನು ಬುಡಮೇಲು ಮಾಡುವುದಕ್ಕೇ ಸರಕಾರಗಳಲ್ಲಿರುವದೆಂದು ಆ ಪಾರ್ಟಿ ನಾಯಕರು ಹೇಳಿರುವದರಿಂದ ಅವರ ಮೇಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ತ್ರಿವರ್ಣ ಧ್ವಜ ಹಾರಿಸಿದ ನಂತರ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೇಳಿದರು.

★

ಶೋಚನೀಯವು

ಮಂಗಳೂರು— ಗಾಂಧೀಜೀಯವರು ಇನ್ನು ಕೆಲವು ವರ್ಷಗಳು ಬದುಕಿದ್ದಿದ್ದರೆ, ಇಲ್ಲಿನ ಸನ್ನಿವೇಶವನ್ನು ಕಂಡು ಸಂಕಟದಿಂದ ಅವರ ಮನಸ್ಸು ಹಂಗೆಯೇಳುತ್ತಿತ್ತು, ಅವರ ಆತ್ಮವು ಒದ್ದಾಡುತ್ತಿತ್ತು ಎಂದು ಶ್ರೀ ॥ ಕೃಷ್ಣಮೂರ್ತಿಯವರು ಹೇಳಿದರು.

ಬ್ಯಾಂಕು ರಾಷ್ಟ್ರೀಕರಣ

ಬೆಂಗಳೂರು— ಏಐಸಿಸಿ ಅನುಮೋದಿಸುವ ಆರ್ಥಿಕ ನೀತಿ ಠರಾವಿನಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಸೇರಬೇಕೆಂಬ, 150 ಪ್ರತಿನಿಧಿಗಳು ರುಜುಮಾಡಿದ ಮನವಿ ಕಾಂಗ್ರೆಸ್ ಅಧ್ಯಕ್ಷರಿಗೆ ಕೊಡಲಾಯಿತು – ಒಟ್ಟು ಸುಮಾರು 390 ಪ್ರತಿನಿಧಿಗಳು ಬಂದಿರುವರು – ಪ್ರಧಾನಿಯವರೂ ತಮ್ಮ ಟಿಪ್ಪಣಿಯಲ್ಲಿ ಇದನ್ನೇ ಸೂಚಿಸಿರುವರು – ನಗರದ ಹಲವು ಬ್ಯಾಂಕುಗಳ ಮುಂದೆ ಬ್ಯಾಂಕು ನೌಕರರು ಪ್ರದರ್ಶನ ನಡೆಸಿ ಪ್ರಧಾನಿಗಳ ಸಲಹೆಗೆ ಬೆಂಬಲ ನೀಡಿರುವರು – ಲಕ್ನೋ ಕಾಂಗ್ರೆಸ್ ಕಾರ್ಯದರ್ಶಿಯರೂ ಮತ್ತೆ ಕೆಲವರೂ ಇವನ್ನು ಬೆಂಬಲಿಸಿ ಕಾಂಗ್ರೆಸ್ ಅಧ್ಯಕ್ಷರಿಗೆ ತಂತಿ ಕಳಿಸಿರುವರು ಪಶ್ಚಿಮ ಬಂಗಾಳ ಸರ್ಕಾರದ ಮುಖ್ಯ ಮಂತ್ರಿ ಶ್ರೀ ಅಜ್ಯಾ ಘೋಷರು ಬೆಂಬಲಿಸಿರುವರು.

★

ನಮಗೆ ಬೇಡ, ಅವರಿಗೆ ಬೇಕು

ಬೆಂಗಳೂರು— ಮೈಸೂರು ಸರಕಾರವು ಎರಡು ದಿನಗಳ ಹಿಂದೆ ಪಟಾಸ್ಕರ್ ಸೂತ್ರವನ್ನು ತಿರಸ್ಕರಿಸಿರುವಾಗ, ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ನಾಯಿಕ್ ಅದೇ ಸರಿಯಾದ ಪರಿಹಾರವೆಂದಿರುವರು.

●

ಭಾರತೀಯರು ಕುಳ್ಳಾಗುತ್ತಿರುವರು

ಬೆಂಗಳೂರು— ಭಾರತೀಯರ ಎತ್ತರ 3 ದಶಕಗಳಿಂದ 2 ಅಂಗುಲ ಕಡಮೆಯಾಗುತ್ತಿರುವದೆಂದ ಸಂಪರ್ಕ ಮಂತ್ರಿ ಶ್ರೀ ಶೇರ್ ಹೇಳಿದರು.

★

ವೃತ್ತಿ ತೆರಿಗೆ

ತೀರ್ಥಹಳ್ಳಿ— ತಿಂಗಳಿಗೆ ರೂ 200 ಕ್ಕಿಂತ ಹೆಚ್ಚು ವರಮಾನವಿರುವವರಿಗೆ ಒಕ್ಕೂಟದಿಂದ ವೃತ್ತಿ ತೆರಿಗೆ ವಿಧಿಸಲು ಪೌರಸಭೆ ನಿರ್ಧರಿಸಿತು.

ಅಶನ ವಸತಿಯ ವಿದ್ಯಾಶಾಲೆಯಲ್ಲಿ

ಘೋರ ಕೃತ್ಯ

ಇಟಲಿಯ ದಕ್ಷಿಣ ರೋಮಿನ ಅಲ್ಬಾನ್ ಬೆಟ್ಟಗಳ ಪಾದದಲ್ಲಿ ಸೇಂಟ್ ರೀಟಾ ಬೋರ್ಡಿಂಗ್ ಸ್ಕೂಲನ್ನು ನಡೆಸುತ್ತಿದ್ದ ಮಾಜಿ ಸನ್ಯಾಸಿನಿ ಮೇರಿಯಾ ಡಿಲೇಟಾ ಪಾಗ್ಲಿಯು, ಅಲ್ಲಿ 15 ಮಕ್ಕಳನ್ನು ಸಂಜೆ 6 ರಿಂದ ಬೆಳಿಗ್ಗೆ 7 ರವರಿಗೆ ಹಾಸಿಗೆಗೂ ಅವಕಾಶಕ್ಕೂ ಸರಪಳಿಬಿಗಿದು, ಇತರರನ್ನು ಬೆತ್ತ ಕೆಳಚಿ ಕಸೂಡಿಗೆಗಳಿಂದ ಹೊಡೆಯುತ್ತಿದ್ದಳೆಂದೂ ಪೋಲೀಸರು ಅವಳನ್ನು ದಸ್ತಗಿರಿ ಮಾಡಿರುವರು. ಇದು 4 ರಿಂದ 8 ವರ್ಷಗಳವರೆಗೆ ಶಿಕ್ಷೆ ವಿಧಿಸಲ್ಪಡುವ ತಕ್ಸೀರಾಗಿದೆ. ಅಲ್ಲದೆ 4 ರಿಂದ 8 ವರ್ಷದ ಮಕ್ಕಳಿಗೆ ಸರಿಯಾಗಿ ಆಹಾರ ಕೊಡುತ್ತಿರಲಿಲ್ಲವೆಂದೂ ಆಪಾದಿಸಲಾಗಿದೆ.

ಚಿಕ್ಕ ಭೂನಾಲೀಕರು

ಬೆಂಗಳೂರು— ರಾಜ್ಯದಲ್ಲಿ 10 ಎಕ್ರೆಗಿಂತ ಕಡಮೆ ಹೊಂದಿರುವ ಭೂಮಾಲೀಕರು ಶೇಕಡ 67 ಇರುವರೆಂದು ಹೇಳಲಾಗಿದೆ.

ಬೆಳ್ಳೀ

ನ್ಯೂಯಾರ್ಕು—ಭಾರತದಿಂದ ಹೇರಳವಾಗಿ ಬೆಳ್ಳಿ ಬರುವ ನಿರೀಕ್ಷೆಯಿದ್ದರೂ ಇನ್ನು 5 ರಿಂದ 10 ವರ್ಷಗಳೊಳಗೆ ಬೆಳ್ಳಿ ಬೆಲೆ ಔನ್ಸಿಗೆ 10 ಡಾಲರುಗಳಾಗುವುದೆಂದು ಬ್ಯಾರನ್ಸ್ ವೀಕ್ಲಿ ಪ್ರಕಟಿಸಿದೆ.

ರಾಷ್ಟ್ರಪ್ರಾಣಿ

ನವದೆಹಲಿ— ಭಾರತದ ರಾಷ್ಟ್ರಪ್ರಾಣಿ ವಿವಿಧ ರಾಜ್ಯಗಳು ನಿವಿಧ ರೀತಿಯಲ್ಲಿ ಆನೆ, ಸಿಂಹ, ಹುಲಿ, ಜಿಂಕೆ, ಘೇಂಡಾಮೃಗ ಆಯ್ಕೆಮಾಡಿದ್ದವು. ವನ್ಯಜೀವಿ ಸಮಿತಿಯು ಸಿಂಹವನ್ನು ರಾಷ್ಟ್ರಪ್ರಾಣಿಯಾಗಿ ಆರಿಸಿದೆ.

ದುರಂತ

ತೈವೆ— ಜಯಫಂಗ್ ಕಲ್ಲಿಜ್ಜಲು ಗಣಿಯಲ್ಲಿ ಗ್ಯಾಸ್ ಸ್ಫೋಟವಾಗಿ 23 ಮಂದಿ ಸತ್ತು 34 ಮಂದಿ ಗಾಯಗೊಂಡರು.

ಸಾರಾಯಿ ತಯಾರಿಕೆ

ಕಲ್ಲೀಕೋಟೆ— ಗೇರುಪೊಪ್ಪು ಹಣ್ಣಿನಿಂದು ಸಾರಾಯಿ ತಯಾರಿಸಲು ಕೇರಳ ಸರ್ಕಾರ ಮೂರು ಲೈಸೆನ್ಸು ಕೊಟ್ಟಿದೆ.

ಎಕ್ಸಿಕ್ಯುಟೀವ್ ಇಂಜಿಯರ್‌ರವರ ಕಛೇರಿ
ಕಟ್ಟಡಗಳ ವಿಭಾಗ, ಮೈಸೂರು–1
ತಾ|| 4–7–69

ಪ್ರಕಟಣೆ

ತಾ|| 3–7–1969

ವಿಭಾಗದ ಸಂಗ್ರಹ ಪ್ರದೇಶದಲ್ಲಿ ಸಂಗ್ರಹಿಸಲಾಗಿರುವ ಈ ಕೆಳಗೆ ಕಂಡ ಕೆಲಸಕ್ಕೆ ಬಾರದ ಖಾಲಿ ಸಿಮೆಂಟ್ ಚೀಲಗಳನ್ನು ಕೊಳ್ಳುವುದಕ್ಕಾಗಿ 24–7–69 ರವರೆಗೆ ಸಾರ್ವಜನಿಕರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆಲಸಕ್ಕೆ ಬಾರದ ಮತ್ತು ನಿರಾಕರಿಸಲ್ಪಟ್ಟ ಖಾಲಿ ಗೋಣಿ ಸಿಮೆಂಟ್ ಚೀಲಗಳು (11000 ಚೀಲಗಳು) (ಅಂದಾಜು)

ಇ. ಎಂ. ಡಿ. ರೂ. 250

ವಿಭಾಗದ ಸಂಗ್ರಹ ಪ್ರದೇಶದಲ್ಲಿ ಕೆಲಸದ ಎಲ್ಲಾ ದಿನಗಳಲ್ಲೂ ಬೆಳಿಗ್ಗೆ 10–30 ರಿಂದ ಸಂಜೆ 5–30 ರವರೆಗೆ ಖಾಲಿ ಸಿಮೆಂಟ್ ಚೀಲಗಳನ್ನು ಇಚ್ಛೆಯುಳ್ಳ ಜನರು ಪರಿಶೀಲಿಸಬಹುದು.

ಮೈಸೂರಿನಲ್ಲಿರುವ, ಕಟ್ಟಡಗಳವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಹೆಸರಿಗೆ ಇ. ಎಂ. ಡಿ. ಠೇವಣಿ ಮಾಡಿದ ಬಗ್ಗೆ ಪ್ರತಿಯೊಂದು ಟೆಂಡರ್ ನೊಡನೆ ಒಂದು ಬಿಜಾನೆ ಚಲನ್ನನ್ನು ಲಗತ್ತಿಸಿರಬೇಕು.

ಮೇಲ್ಕಂಡದ್ದರ ಸಂಗಡ, ಆಗತ್ಯ ಮಾರಾಟ ತೆರಿಗೆ ಮತ್ತು ಇತರ ತೆರಿಗೆಗಳು ಇರುವುದಾದರೆ, ಕೊಳ್ಳುವ ಕಾಲದಲ್ಲಿ ಅವನ್ನು ಪಾವತಿ ಮಾಡಬೇಕು.

ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನು ಕೊಡದೆ ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಯವರಿಂದ ಕಾದಿಡಲ್ಪಟ್ಟಿದೆ.

ಸಹಿ/ ವೈ. ಶಿವಪ್ಪ
ಎಕ್ಸಿಕ್ಯುಟೀವ್ ಇಂಜಿನಿಯರ್,
ಕಟ್ಟಡಗಳ ವಿಭಾಗ.

ತಟಸ್ಥ ರಾಷ್ಟ್ರಗಳ ಸಮ್ಮೇಳನ

ಬೆಲ್ಗ್ರೇಡ್— 51 ತಟಸ್ಥ ದೇಶಗಳ ಸಮ್ಮೇಳನವನ್ನು ನಿನ್ನೆ ಯುಗೊಸ್ಲೊವಿಯಾ ಪ್ರಧಾನಿ ಮಿತ್ಯಾರ್ ಬಬಿಕ್ ಉದ್ಘಾಟಿಸಿದರು – ಇದರಲ್ಲಿ ಪಾಕಿಸ್ತಾನವಿಲ್ಲ.

ಅವೋಘ 2 ನೇ ವಾರ

ವುಡ್‌ಲ್ಯಾಂಡ್ಸ್

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯವೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿರಿ

ಅನೋಖಿರಾತ್

ಸಂಗೀತ – ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್
ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಆಪೆರಾ— 11–7–69 ರಿಂದ

ಅವೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi. Sri Opera Talkies. Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality—Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4.